ಗತಿ ಮಾಡಿಸಿರುವೆ, ಹೇಗಿದೆ ನನ್ನ ಪ್ಲ್ಯಾನು' ಎನ್ನುತ್ತ ನರಿ ಭುಜ ಕುಣಿಸಿತು. ನರಿಯ ಕುತಂತ್ರ ಬುದ್ಧಿ ಸಿಂಹಕ್ಕೆ ತಿಳಿದು ತೀವ್ರ ವ್ಯಥೆಪಟ್ಟಿತು. ನಾನೆಂಥ ಪೆದ್ದು ಎಂದು ಬಂಡೆಗೆ ತಲೆ ಚಚ್ಚಿಕೊಳ್ಳತೊಡಗಿತು. ನರಿಯು ಎದೆಯುಬ್ಬಿಸಿ, 'ಎಲೇ, ಸಿಂಹರಾಜ ಕೊತ್ತಂಬರಿ ಬೀಜ' ಈಗ ನೀನು ನಾನು ಹೇಳಿದಂತೆ ಕೇಳಬೇಕು. ಇಲ್ಲವಾದರೆ, ಸಿಂಹದ ಬಾಯಲ್ಲಿ ಹಲ್ಲಿಲ್ಲ ಹಲ್ಲಿಲ್ಲ ಎಂದು ಕಾಡಿನ ತುಂಬ ಡಂಗೂರ ಸಾರುತ್ತೇನೆ. ಆಗ ನಿನಗ್ಯಾರು ಹೆದರುತ್ತಾರೆ? ಎಲ್ಲಾ ಸೇರಿ ನಿನ್ನನ್ನು ಮುಗಿಸಿಬಿಡುತ್ತಾರೆ. ನನಗೆ 'ಕಾಡಿನ ರಾಜ' ಎಂದು ಪಟ್ಟ ಕಟ್ಟಿಬಿಡು. ನಿನ್ನ ಮೇಲೆ ಸವಾರಿ ಮಾಡುತ್ತ ನಾನೂ ರಾಜ್ಯಭಾರ ಮಾಡುತ್ತೇನೆ' ಎಂದಿತು. ನರಿಯ ಮಾತಿಗೆ ದಿಕ್ಕು ತೋಚದಂತಾಗಿ ಎಲ್ಲ ಮಾತಿಗೂ ಸಿಂಹ ಹುಂ ಗುಟ್ಟಿತು. ನರಿಯನ್ನು ಹೊತ್ತುಕೊಂಡು ಕಾಡಿನೆಲ್ಲೆಡೆ ಸಂಚರಿಸತೊಡಗಿತು. ಎಲ್ಲಾ ಪ್ರಾಣಿ ಪಕ್ಷಿಗಳು ಸಿಂಹದ ಬದಲಾಗಿ ನರಿಗೆ ಹೆದರಲಾರಂಭಿಸಿ ಜೈಕಾರ ಹಾಕಲಾರಂಭಿಸಿದವು. ನರಿಯು ರಾಜ ಠೀವಿಯಲ್ಲಿ ಮೀಸೆ ತಿರುವಲು ಶುರುಮಾಡಿತು. ಸಿಂಹವನ್ನು ಮಾತಿನಿಂದಲೇ ಚುಚ್ಚುತ್ತಿತ್ತು. ಇದು ಯಾಕೋ ಅತಿಯಾಯಿತೆಂದು ಸಿಂಹ ತನ್ನ ಕೈಯಿಂದ ಹಣೆ ಚಚ್ಚಿಕೊಳ್ಳುವಾಗ ಅದರ ಪಂಜಿನ ಶಕ್ತಿ ನೆನಪಾಯಿತು. ಅರೆ! ಹಲ್ಲುಗಳು ಉದುರಿದರೂ ನನ್ನ ಮೊನಚಾದ ಕೈಕಾಲಿನ ಉಗುರುಗಳಿವೆಯಲ್ಲ! ನಾನೆಂಥ ದಡ್ಡ. ನರಿಯಿಂದ ಮೋಸವಾದ ಭಯದಲ್ಲಿ ನನ್ನ ಶಕ್ತಿಯನ್ನೇ ಮರೆತು ಹೋದೆನಲ್ಲ ಎಂದು ಚಡಪಡಿಸಿತು. ಮರುದಿನ ನರಿಯನ್ನು ಕರೆದು, 'ನರಿರಾಯ ಇಂದಿನಿಂದ ನೀನೇ ಈ ಕಾಡಿಗೆ ರಾಜನಾಗಿರು. ನಾನಿನ್ನು ನಿನ್ನ ಸೇವಕ. ಈ ಸಿಹಿ ಸುದ್ದಿ ತಿಳಿಸಲು ಡಂಗೂರ ಸಾರಿ, ಎಲ್ಲಾ ಪ್ರಾಣಿಗಳನ್ನೂ ಗುಹೆ ಹತ್ತಿರ ಸೇರಿಸು' ಎಂದು ವಿನಯದಿಂದ ಹೇಳಿತು.

ಹಿರಿ ಹಿರಿ ಹಿಗ್ಗಿದ ನರಿ ಕಾಡಿನ ತುಂಬಾ ಡಂಗೂರ ಸಾರಿ ಕಾಡಿನ ಸಕಲ ಪ್ರಾಣಿಗಳನ್ನೂ ಸಿಂಹದ ಗುಹೆ ಮುಂದೆ ಬರಲು ಆಜ್ಞೆ ಮಾಡಿತು. ಎಲ್ಲವೂ ಸಿಂಹದ ಗುಹೆ ಮುಂದೆ ಸೇರಿದವು. ಸಿಂಹವು ಎಲ್ಲರೆದುರು ತನ್ನ ಬಾಯಿಗೆ ಹಾಕಿದ್ದ ಮಾಸ್ಕ್ ತೆಗೆದು, ನನ್ನ ಹಲ್ಲುಗಳಿಗೆ ಹುಳಹತ್ತಿದ್ದರಿಂದ ಎಲ್ಲವೂ ಉದುರಿವೆ. ನಾನೀಗ ಮೊದಲಿನಂತೆ ಗರ್ಜಿಸಲಾರೆ. ನಿಮ್ಮನ್ನು ಬೇಟೆಯಾಡಿ ತಿನ್ನಲಾರೆ. ಆದ್ದರಿಂದ ನನ್ನ ಆಪ್ತಮಿತ್ರ ನರಿರಾಯನೇ ಇಂದಿನಿಂದ ರಾಜನಾಗುತ್ತಾನೆ' ಎನ್ನುತ್ತ ನರಿಯನ್ನು ತಬ್ಬಿಕೊಳ್ಳಲು ಹತ್ತಿರ ಕರೆಯಿತು. ಖುಷಿ ಜಂಬದಿಂದ ನರಿ ಸಿಂಹವನ್ನು ತಬ್ಬಿಕೊಂಡಿತು. ಇದ್ದಕ್ಕಿದ್ದಂತೆ ಸಿಂಹ ಸಿಟ್ಟಿನಿಂದ ನರಿಯ ಮುಖ ಮೈಯಲ್ಲೆಲ್ಲ ತನ್ನ ಕೈಗಳಿಂದ ಹೊಡೆಯಲಾರಂಭಿಸಿತು. ಹರಿತ ಉಗುರುಗಳಿಂದ ನರಿಯ ಮೈ ಪರಚುತ್ತ ನರಿಯನ್ನು ಎತ್ತೆತ್ತಿ ನೆಲಕ್ಕಪ್ಪಳಿಸಿತು. ಸಿಂಹದ ಸಿಟ್ಟಿನ ಪೆಟ್ಟು ತಿಂದ ನರಿಯು ವಿಲವಿಲನೆ ಒದ್ದಾಡತೊಡಗುತ್ತ ಕೈ ಮುಗಿದು 'ಬಿಟ್ಟು ಬಿಡು ಸಿಂಹರಾಜ, ಎಲ್ಲಾದರೂ ಬದುಕುವೆ' ಎನ್ನುತ್ತ ಕುಂಟುತ್ತ ಕಾಡಿನ ಪೊದೆ ಸೇರಿತು. ಸಿಂಹದ ಬಾಯಲ್ಲಿ ಹಲ್ಲಿಲ್ಲದಿದ್ದರೂ ಅದರ ಶಕ್ತಿ ಅರಿತ ಎಲ್ಲಾ ಪ್ರಾಣಿ– ಪಕ್ಷಿಗಳು ಹೆದರಿ ಗಪ್ ಚುಪ್ ಆದವು. ನೀನೇ ನಮ್ಮ ರಾಜ ಎಂದು ಆನೆಗಳ ಹಿಂಡು ಘೀಳಿಟ್ಟವು. 'ಗುಣ ನೋಡಿ ಗೆಳೆತನ ಮಾಡು' ಎಂದು ತನ್ನ ತಾಯಿ ಹೇಳಿದ ಮಾತು ಸ್ಮರಿಸುತ್ತ, ಮಿತ್ರದ್ರೋಹಿ ನರಿಯನ್ನು ಶಪಿಸುತ್ತ ಗರ್ಜಿಸದೇ ಬೊಚ್ಚು ಬಾಯಿ ಸಿಂಹ ಮತ್ತೆ ತನ್ನ ಗಾಂಭೀರ್ಯದ ನಡೆ ಮುಂದುವರಿಸಿತು. ■





**ಜನ್ಯಾ ಎಂ.ಪಿ.**
6ನೇ ತರಗತಿ, ಎಂ.ಜಿ. ಸ್ಕೂಲ್ ಫಾರ್ ಎಕ್ಸಲೆನ್ಸ್ , ಬೆಂಗಳೂರು

## ಕುಂಚ ಪ್ರಪಂಚ





**ಟಿ. ಆಧ್ಯಾ**
6ನೇ ತರಗತಿ,
ರಾಯಲ್ ಕೊಂಕೊರ್ಡ
ಇಂಟರ್‌ನ್ಯಾಷನಲ್ ಶಾಲೆ,
ಕಲ್ಯಾಣ ನಗರ, ಬೆಂಗಳೂರು

'ಸುಧಾ' ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಅವರೇ ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:**
editorsu@sudha.co.in